**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,**

**ಬ್ಯಾಡಗಿ.**

**ಸಿ.ಸಿ. ನಂ. 259/2024.**

**ಸಿ ಡಬ್ಲ್ಯೂಃ 3**

**ಪಿ ಡಬ್ಲ್ಯೂಃ 1**

| | | |
|---|---|---|
| ಹೆಸರು | : | ಬಸವರಾಜ ಲಿಂಗದಳ್ಳಿ |
| ತಂದೆಯ ಹೆಸರು | : | ರಮೇಶಪ್ಪ |
| ವಯಸ್ಸು | : | 34 ವರ್ಷ |
| ಉದ್ಯೋಗ | : | ಕೂಲಿ |
| ವಾಸಸ್ಥಳ | : | ಸೂಡಂಬಿ |

**ದಿನಾಂಕಃ 25-04-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ**

ನನಗೆ ಈ ಪ್ರಕರಣದ ಬಗ್ಗೆ ಯಾವುದೆ ಮಾಹಿತಿ ಇಲ್ಲ. ಈಗ ಸಾಕ್ಷಿಗೆ ಪಂಚನಾಮೆಯನ್ನು ತೋರಿಸಿದ್ದು ಸಾಕ್ಷಿ ಅದರ ಮೇಲಿರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ನಿಪಿ-1 ರ ಸಂಗತಿಗಳು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಮದ್ಯದ ಪ್ಯಾಕೆಟಗಳನ್ನು ಅಮಾನತು ಪಡಿಸಿಕೊಂಡಿಲ್ಲ ಹಾಗೂ ಪಂಚನಾಮೆಯನ್ನು ನನ್ನ ಸಮಕ್ಷಮ ಜರುಗಿಸಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ.

**(ಈ ಹಂತದಲ್ಲಿ ಸ.ಸ.ಅ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಅವರಿಗೆ ಪಾಟೀ ಸವಾಲು ಮಾಡಲು ಅನುಮತಿಸಬೇಕೆಂದು ಕೇಳಿಕೊಂಡ ಮೇರೆಗೆ ಅನುಮತಿಸಲಾಗಿದೆ)**

**<u>ಪಾಟೀ ಸವಾಲುಃ ಎಪಿಪಿ ರವರಿಂದಃ</u>**

ದಿನಾಂಕಃ 30.03.2024 ರಂದು ರಾತ್ರಿ 09.00 ರ ಸಮಯದಲ್ಲಿ ಚಾಸಾ-1 ರವರು ನನ್ನನ್ನುಹಾಗೂ ಚಾಸಾ-2 ರವರನ್ನು ಠಾಣೆಗೆ ಕರೆಯಿಸಿ ಆರೋಪಿಯಾದ ಮಹಾಂತೇಶ ಬಸವಣ್ಣೆಪ್ಪ ಬಡಿಗೇರ ರವರು ಕಾಶಂಬಿ ಗ್ರಾಮದ ತನ್ನ ಮನೆಯ ಮುಂಭಾಗದ ಸಾರ್ವಜನಿಕ ರಸ್ತೆಯ ಪಕ್ಕದಲ್ಲಿ ಅಕ್ರಮವಾಗಿ ಸಾರಾಯಿ ಮಾರಾಟ ಮಾಡುತ್ತಿದ್ದಾನೆ ಎಂದು ಬಾತ್ಮಿ ಬಂದಿದೆ ಎಂದು ತಿಳಿಸಿ ಹಾಗೂ ಸದರಿ ಆತನ ಮೇಲೆ ರೆಡ ಮಾಡುವ ಕಾಲಕ್ಕೆ ಪಂಚರಾಗುವಂತೆ ಕೇಳುವ ಕಾಲಕ್ಕೆ ನಾನು ಹಾಗೂ ಚಾಸಾ-2 ರವರು ಖಾಸಗಿ ವಾಹನದಲ್ಲಿ ಚಾಸಾ-1, 5 ಮತ್ತು 6 ರವರೊಟ್ಟಿಗೆ ಸದರಿ ಕಾಸಂಬಿ ಗ್ರಾಮಕ್ಕೆ ಹೋದೆವು ಎಂದರೆ ಸರಿಯಲ್ಲ. ಆಗ ಸದರಿ ಆರೋಪಿಯ ಮನೆಯ ಬಳಿ ಮರೆಯಾಗಿ ನಿಂತು ನೋಡಲಾಗಿ ಒಬ್ಬ ವ್ಯಕ್ತಿ ರಸ್ತೆಯ ಪಕ್ಕ ಕುಳಿತುಕೊಂಡು ರಟ್ಟಿನ ಬಾಕ್ಸನಲ್ಲಿ ಸಾರಾಯಿ ಇಟ್ಟುಕೊಂಡು ಜನರಿಗೆ ಸಾರಾಯಿ ಮಾರಾಟ ಮಾಡುತ್ತಿದ್ದ ಬಗ್ಗೆ ಕಾತರಿ ಮಾಡಿಕೊಂಡು ರಾತ್ರಿ 09.10 ರ ಸಮಯದಲ್ಲಿ ದಾಳಿ ಮಾಡಿದಾಗ ಸದರಿ ರಟ್ಟಿನ ಬಾಕ್ಸನ್ನು ಆತ ಅಲ್ಲೇ ಬಿಟ್ಟು ಓಡಿ ಹೋದ ಎಂದರೆ ಸರಿಯಲ್ಲ.

2. ಸದರಿ ಬಾಕ್ಸ ನಲ್ಲಿ 3 ಎಕ್ಸ ವಿಸ್ಕಿ 180 ಎಂ.ಎಲ್ ನ 19 ಪೌಚಗಳು ಇದ್ದವು ಎಂದರೆ ನನಗೆ ಗೊತ್ತಿಲ್ಲ. ಹಾಗೂ ಸದರಿ ಮದ್ಯೆದ ಪೌಚಗಳನ್ನು ಚಾಸಾ-1 ರವರು ನನ್ನ ಹಾಗೂ ಚಾಸಾ-2 ರವರ ಸಮಕ್ಷಮ ಅಮಾನತು ಪಡಿಸಿಕೊಂಡರು ಎಂದರೆ ಸರಿಯಲ್ಲ. ಹಾಗೂ ಆ ಬಗ್ಗೆ ರಾತ್ರಿ 09.10 ರಿಂದ 10.10 ಸಮಯದಲ್ಲಿ ಪಂಚನಾಮೆಯನ್ನು ಜರುಗಿಸಿದರು ಎಂದರೆ ಸರಿಯಲ್ಲ. ಹಾಗೂ ಸದರಿ ಮು.ಮಾ.ಗಳ ಮೇಲೆ ಒಂದು ಬಿಳಿ ಹಾಳೆಯನ್ನು ಅಂಟಿಸಿ ಅದರ ಮೇಲೆ ನಮ್ಮ ಸಹಿಯನ್ನು ಪಡೆದರು

ಎಂದರೆ ಸರಿಯಲ್ಲ. ಈಗ ಸಾಕ್ಷಿಗೆ ಸದರಿ ಪಂಚನಾಮೆಯ ಸಂಗತಿಗಳನ್ನು ಓದಿ ಹೇಳಿದ್ದು ಸದರಿ ಸಂಗತಿಗಳನ್ನು ಸಾಕ್ಷಿ ಅಲ್ಲಗಳೆದಿದ್ದು ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದೆ. ಪಂಚನಾಮೆಯ ಸಂಗತಿಗಳು ನನಗೆ ಗೊತ್ತಿದ್ದರೂ ಸಹ ಸದರಿ ಸಂಗತಿಗಳು ನನಗೆ ಗೊತ್ತಿಲ್ಲ ಹಾಗೂ ಪೋಲಿಸರು ನನ್ನ ಸಮಕ್ಷಮ ಮಹಜರ ಮಾಡಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಅಮಾನತು ಪಡಿಸಿಕೊಂಡಿಲ್ಲ ಎಂದು ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರತ್ತಾರೆ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೆ.ಸರಿ ಇದೆ.

**Sd/-**

ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ ಬ್ಯಾಡಗಿ.